**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್ 75/1ಎ10 ರಲ್ಲಿ ವಿಸ್ತೀರ್ಣ 0-16 ಗುಂಟೆ ಪ್ರದೇಶಕ್ಕೆ ಶ್ರೀ ಡಿ.ಬಸವರಾಜು ಇವರ ಪರವಾಗಿ ವಾಸದ ಉಪಯೋಗಕ್ಕೆ ಈ ಕಛೇರಿಯ ಆದೇಶ ಸಂಖ್ಯೆ ನಅಪ್ರಾತು/ಯೋಶಾ/ಏಕನಿವೇಶನ/07/ನಕ್ಷೆ ದೃಢೀಕರಣ/2009-10 ದಿನಾಂಕ 17-03-2011 ರಂತೆ ವಿನ್ಯಾಸ ಅನುಮೋದನೆಯಾಗಿರುತ್ತದೆ. ದಿನಾಂಕ 28-07-2011 ರಂದು ಪ್ರಸ್ತಾವಿತ ಪ್ರದೇಶದ ಸಾರ್ವಜನಿಕರು ತಕರಾರು ಅರ್ಜಿ ಸಲ್ಲಿಸಿ, ವಿನ್ಯಾಸ ಅನುಮೋದನೆಯಿಂದ ಸಂಪರ್ಕ ರಸ್ತೆ ಕಲ್ಪಿಸಲು ಹಾಗೂ ಮಳೆ ನೀರು ಹಾಗೂ ಒಳಚರಂಡಿಗೆ ಸಂಬಂಧಿಸಿದಂತೆ ವ್ಯವಸ್ಥೆ ಕಲ್ಪಿಸಲು ತೊಂದರೆಯಾಗುತ್ತಿದೆಂದು ವಿನ್ಯಾಸ ರದ್ದುಪಡಿಸಲು ಕೋರಿರುತ್ತಾರೆ. ಆದ್ದರಿಂದ ಪ್ರಸ್ತಾವಿತ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಅನುಮೋದನೆಯಾಗಿರುವ ಏಕ ನಿವೇಶನ ವಿನ್ಯಾಸವನ್ನು ರದ್ದುಪಡಿಸುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಅರ್ಜಿದಾರರ ಕೋರಿಕೆಯಂತೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಈ ಅನುಮೋದಿತ ಏಕ ನಿವೇಶನದಿಂದ ತೊಂದರೆಯಾಗುವುದರಿಂದ ಹಾಗೂ ರಸ್ತೆ ಸಂಪರ್ಕವನ್ನು ಕಲ್ಪಿಸುವುದು ಅವಶ್ಯಕವಾಗಿರುವುದರಿಂದ ಈ ಏಕ ನಿವೇಶನ ವಿನ್ಯಾಸ ಅನುಮೋದನೆಯನ್ನು ರದ್ದುಪಡಿಸಬಹುದಾಗಿರುತ್ತದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದಲ್ಲಿ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್ 75/1ಎ10 ರಲ್ಲಿ ವಿಸ್ತೀರ್ಣ 0–16 ಗುಂಟೆ ಪ್ರದೇಶಕ್ಕೆ ಏಕ ನಿವೇಶನವನ್ನು ವಿನ್ಯಾಸವನ್ನು ರದ್ದುಪಡಿಸುವುದು ಸೂಕ್ತವಾಗಿರುತ್ತದೆಂದು ನಗರ ಯೋಜನಾ ಸದಸ್ಯರು ತಿಳಿಸಿದರು. ಅದರಂತೆ ವಿನ್ಯಾಸ ರದ್ದುಪಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 21** ತುಮಕೂರು ನಗರದ ಕೆಸರಮಡು ಗ್ರಾಮದ ಸರ್ವೆ ನಂಬರ್ 92 ರಲ್ಲಿ ಒಟ್ಟು ವಿಸ್ತೀರ್ಣ 3 ಎಕರೆ 04 ಗುಂಟೆ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ಕೆ.ಎಸ್.ಅಪ್ಪಾಜಯ್ಯ ಎಂಬುವವರು ತುಮಕೂರು ನಗರದ ಕೆಸರಮಡು ಗ್ರಾಮದ ಸರ್ವೆ ನಂಬರ್ 92 ರಲ್ಲಿ ಒಟ್ಟು ವಿಸ್ತೀರ್ಣ 3 ಎಕರೆ 04 ಗುಂಟೆ ಪ್ರದೇಶದಲ್ಲಿ ವಾಸದ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ನೀಡಲು ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯ ಆದೇಶ ಸಂಖ್ಯೆ ಎಎಲ್ಎನ್(ಟಿಎಂಕೆ)/ಸಿಆರ್/85/2011–12 ದಿನಾಂಕ 08–06–2011 ರಂತೆ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ. ಸದರಿ ಪ್ರದೇಶವು ಪರಿಷ್ಕೃತ ಮಹಾಯೋಜನೆಯಂತೆ ವಸತಿ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಸದರಿ ಪ್ರದೇಶಕ್ಕೆ ಪೂರ್ವದ ಕಡೆಯಿಂದ ಹಾಲಿ ಹಾಗೂ ಪ್ರಸ್ತಾವಿತ 18 ಮೀಟರ್ ಅಗಲದ ರಸ್ತೆ ಸಂಪರ್ಕ ಇರುತ್ತದೆ. ಸರ್ಕಾರದ ಆದೇಶ ಸಂಖ್ಯೆ ನಅಇ / 377 / ಬೆಂರೂಪ್ರಾ / 2010 ದಿನಾಂಕ 10–03–2011 ರ ವಲಯ ನಿಯಮಾವಳಿ ಪ್ರಕಾರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ವಿನ್ಯಾಸ ಮಾಲೀಕರು ಸ್ವಂತ ಖರ್ಚಿನಿಂದ ನಿರ್ವಹಿಸುವ ಷರತ್ತಿಗೆ ಒಳಪಟ್ಟು ವಿನ್ಯಾಸ ಅನುಮೋದನೆ ನೀಡಲು ಪರಿಗಣಿಸಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಸ್ಥಳ ಪರಿಶೀಲನೆಯಂತೆ, ಪ್ರಸ್ತಾವಿತ ಪ್ರದೇಶಕ್ಕೆ ರಸ್ತೆ ಸಂಪರ್ಕವಿದ್ದು, ಪರಿಷ್ಕೃತ ಮಹಾಯೋಜನೆ 2031 ರಂತೆ ಪ್ರಸ್ತಾವಿತ ಪ್ರದೇಶವು ವಸತಿ ವಲಯದಲ್ಲಿ ಬರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪ್ರಸ್ತಾವಿತ ಪ್ರದೇಶಕ್ಕೆ ಭೂಪರಿವರ್ತನೆಯಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ ನಅಇ / 377 / ಬೆಂರೂಪ್ರಾ / 2010 ದಿನಾಂಕ 10–03–2011 ರಂತೆ ಪ್ರಸ್ತಾವಿತ ಪ್ರದೇಶಕ್ಕೆ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ವಿನ್ಯಾಸ ನಕ್ಷೆ ಅನುಮೋದನೆ ನೀಡಬಹುದಾಗಿರುತ್ತದೆ.

**ತೀರ್ಮಾನ** ಸದರಿ ವಿಷಯವನ್ನು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಅರ್ಜಿದಾರರಾದ ಶ್ರೀ ಕೆ.ಎಸ್.ಅಪ್ಪಾಜಯ್ಯ ಎಂಬುವವರು ತುಮಕೂರು ನಗರದ ಕೆಸರಮಡು ಗ್ರಾಮದ ಸರ್ವೆ ನಂಬರ್ 92 ರಲ್ಲಿ ಒಟ್ಟು ವಿಸ್ತೀರ್ಣ 3 ಎಕರೆ 04 ಗುಂಟೆ ಪ್ರದೇಶದಲ್ಲಿ ವಾಸದ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ನೀಡಲು ಕೋರಿರುವ ವಿಷಯವನ್ನು ಪರಿಗಣಿಸಿಸಲಾಯಿತು. ಅರ್ಜಿದಾರರಿಂದ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ಅರ್ಜಿದಾರರೇ ಸ್ವಂತ ಖರ್ಚಿನಿಂದ ನಿರ್ವಹಿಸಲು ಆದೇಶಿಸುವಂತೆ ತೀರ್ಮಾನಿಸಲಾಯಿತು. ವಸತಿ ವಿನ್ಯಾಸದಲ್ಲಿ ರಚಿಸಲಾಗುವ ಉದ್ಯಾನವನಕ್ಕೆ ಕಲ್ಲಿನ ಬೇಸ್‌ಮೆಂಟ್, ಚೈನ್‌ಲಿಂಕ್ ಪೆನ್ಸಿಂಗ್ ಮತ್ತು ನಾಮಫಲಕ ಅಳವಡಿಸಿ, ಸಸಿಗಳನ್ನು ನೆಡುವಂತೆ ಹಾಗೂ ಸಿ.ಎ.ನಿವೇಶನಕ್ಕೆ ನಾಮಫಲಕ ಅಳವಡಿಸುವ ಷರತ್ತಿಗೊಳಪಟ್ಟು ವಿನ್ಯಾಸ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 22** ತುಮಕೂರು ನಗರದ ಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್ 44/1ಎ ರಲ್ಲಿ ವಿಸ್ತೀರ್ಣ 0-06.02 ಗುಂಟೆ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಏಕ ನಿವೇಶನ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ಮಹದೇವಯ್ಯ ಎಂಬುವವರು ತುಮಕೂರು ನಗರದ ಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್ 44/1ಎ ರಲ್ಲಿ ವಿಸ್ತೀರ್ಣ 0-06.02 ಗುಂಟೆ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಏಕ ವಿನ್ಯಾಸ ಅನುಮೋದನೆ ನೀಡಲು ಕೋರಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯ ಆದೇಶ ಸಂಖ್ಯೆ ಎಎಲ್‌ಎನ್ (ಟಿಎಂಕೆ) /ಸಿಆರ್/ 130/2011-12 ದಿನಾಂಕ 17-06-2011 ರಂತೆ ಭೂ ಪರಿವರ್ತನೆಯಾಗಿರುತ್ತದೆ. ಸದರಿ ಪ್ರದೇಶಕ್ಕೆ ದಕ್ಷಿಣದ ಕಡೆಯಿಂದ 9 ಮೀಟರ್ ಅಗಲದ ರಸ್ತೆ ಸಂಪರ್ಕ ಇರುತ್ತದೆ. ಪರಿಷ್ಕೃತ ಮಹಾಯೋಜನೆಯಂತೆ ವಸತಿ ವಲಯದಲ್ಲಿ ಬರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ/522/ಮೈಅಪ್ರಾ/2005 ದಿನಾಂಕ 10-03-2006 ರಂತೆ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ಏಕ ನಿವೇಶನ ವಿನ್ಯಾಸ ಅನುಮೋದನೆಗೆ ಅವಕಾಶವಿದ್ದು, ಪರಿಗಣಿಸ ಬಹುದಾಗಿರುತ್ತದೆ. ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಸ್ಥಳ ಪರಿಶೀಲನೆಯಂತೆ, ಪ್ರಸ್ತಾವಿತ ಪ್ರದೇಶಕ್ಕೆ ರಸ್ತೆ ಸಂಪರ್ಕವಿದ್ದು, ಪರಿಷ್ಕೃತ ಮಹಾಯೋಜನೆ 2031 ರಂತೆ ಪ್ರಸ್ತಾವಿತ ಪ್ರದೇಶವು ವಸತಿ ವಲಯದಲ್ಲಿ ಬರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪ್ರಸ್ತಾವಿತ ಪ್ರದೇಶಕ್ಕೆ

ಭೂಪರಿವರ್ತನೆಯಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ / 522 / ಮೈಅಪ್ರಾ / 2005 ದಿನಾಂಕ 10-03-2006 ರಂತೆ ಪ್ರಸ್ತಾವಿತ ಪ್ರದೇಶಕ್ಕೆ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ಏಕ ನಿವೇಶನ ವಿನ್ಯಾಸ ಅನುಮೋದನೆ ನೀಡಬಹುದಾಗಿರುತ್ತದೆ.

**ತೀರ್ಮಾನ** ಸದರಿ ವಿಷಯವನ್ನು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಅರ್ಜಿದಾರರಾದ ಶ್ರೀ ಮಹದೇವಯ್ಯ ಎಂಬುವವರು ತುಮಕೂರು ನಗರದ ಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂಬರ್ 44/1ಎ ರಲ್ಲಿ ವಿಸ್ತೀರ್ಣ 0-06.02 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಏಕ ನಿವೇಶನಕ್ಕೆ ಅನುಮೋದನೆ ನೀಡಲು ಕೋರಿರುವ ವಿಷಯವನ್ನು ಪರಿಗಣಿಸಿ, ಅರ್ಜಿದಾರರಿಂದ ಏಕ ನಿವೇಶನವನ್ನು ಪ್ರಾಧಿಕಾರದ ಪೂರ್ವಾನುಮತಿ ಮತ್ತು ವಿನ್ಯಾಸ ಅನುಮೋದನೆ ಪಡೆಯದೇ, ನಿವೇಶನಗಳನ್ನಾಗಿ ವಿಂಗಡಿಸುವುದಿಲ್ಲವೆಂದು ಪ್ರಮಾಣ ಪತ್ರ ಪಡೆದು, ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಹಾಗೂ ಅಭಿವೃದ್ಧಿ ಶುಲ್ಕ ಪಾವತಿಸಿಕೊಂಡು ಏಕ ನಿವೇಶನ ವಿನ್ಯಾಸ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 23** ತುಮಕೂರು ನಗರದ ದೇವರಾಯಪಟ್ಟಣ ಗ್ರಾಮದ ಸರ್ವೆ ನಂಬರ್ 75/1ಎ4 ರಲ್ಲಿ ವಿಸ್ತೀರ್ಣ 0-01.04 ಗುಂಟೆ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಏಕ ನಿವೇಶನ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ಟಿ.ಆರ್.ಗಂಗಣ್ಣ ಇವರು ತುಮಕೂರು ನಗರದ ದೇವರಾಯಪಟ್ಟಣ ಗ್ರಾಮದ ಸರ್ವೆ ನಂಬರ್ 75/1ಎ4 ರಲ್ಲಿ ವಿಸ್ತೀರ್ಣ 0-01.04 ಗುಂಟೆ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಏಕ ವಿನ್ಯಾಸ ಅನುಮೋದನೆ ನೀಡಲು ಕೋರಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯ ಆದೇಶ ಸಂಖ್ಯೆ ಎಎಲ್ಎನ್ (ಟಿಎಂಕೆ) / ಸಿಆರ್/251/2011-12 ದಿನಾಂಕ 07-10-2011 ರಂತೆ ಭೂ ಪರಿವರ್ತನೆ ಯಾಗಿರುತ್ತದೆ. ಸದರಿ ಪ್ರದೇಶಕ್ಕೆ ದಕ್ಷಿಣದ ಕಡೆಯಿಂದ 9 ಮೀಟರ್ ಅಗಲದ ರಸ್ತೆ ಸಂಪರ್ಕ ಇರುತ್ತದೆ. ಪರಿಷ್ಕೃತ ಮಹಾಯೋಜನೆಯಂತೆ ವಸತಿ ವಲಯದಲ್ಲಿ ಬರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ/522/ಮೈಅಪ್ರಾ/2005 ದಿನಾಂಕ 10-03-2006 ರಂತೆ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ಏಕ ನಿವೇಶನ ವಿನ್ಯಾಸ ಅನುಮೋದನೆಗೆ ಅವಕಾಶವಿದ್ದು, ಪರಿಗಣಿಸ ಬಹುದಾಗಿರುತ್ತದೆ. ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಸ್ಥಳ ಪರಿಶೀಲನೆಯಂತೆ, ಪ್ರಸ್ತಾವಿತ ಪ್ರದೇಶಕ್ಕೆ ರಸ್ತೆ ಸಂಪರ್ಕವಿದ್ದು, ಪರಿಷ್ಕೃತ ಮಹಾಯೋಜನೆ 2031 ರಂತೆ ಪ್ರಸ್ತಾವಿತ ಪ್ರದೇಶವು ವಸತಿ ವಲಯದಲ್ಲಿ

ಬರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪ್ರಸ್ತಾವಿತ ಪ್ರದೇಶಕ್ಕೆ ಭೂಪರಿವರ್ತನೆಯಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ / 522 / ಮೈಅಪ್ರಾ / 2005 ದಿನಾಂಕ 10-03-2006 ರಂತೆ ಪ್ರಸ್ತಾವಿತ ಪ್ರದೇಶಕ್ಕೆ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ಏಕ ನಿವೇಶನ ವಿನ್ಯಾಸ ಅನುಮೋದನೆ ನೀಡಬಹುದಾಗಿರುತ್ತದೆ.

**ತೀರ್ಮಾನ**

ಸದರಿ ವಿಷಯವನ್ನು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಅರ್ಜಿದಾರರಾದ ಶ್ರೀ ಟಿ.ಆರ್.ಗಂಗಣ್ಣ ಇವರು ತುಮಕೂರು ನಗರದ ದೇವರಾಯಪಟ್ಟಣ ಗ್ರಾಮದ ಸರ್ವೆ ನಂಬರ್ 75/1ಎ4 ರಲ್ಲಿ ವಿಸ್ತೀರ್ಣ 0-01.04 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಏಕ ನಿವೇಶನಕ್ಕೆ ಅನುಮೋದನೆ ನೀಡಲು ಕೋರಿರುವ ವಿಷಯವನ್ನು ಪರಿಗಣಿಸಿ, ಅರ್ಜಿದಾರರಿಂದ ಏಕ ನಿವೇಶನವನ್ನು ಪ್ರಾಧಿಕಾರದ ಪೂರ್ವಾನುಮತಿ ಮತ್ತು ವಿನ್ಯಾಸ ಅನುಮೋದನೆ ಪಡೆಯದೇ, ನಿವೇಶನಗಳನ್ನಾಗಿ ವಿಂಗಡಿಸುವುದಿಲ್ಲವೆಂದು ಪ್ರಮಾಣ ಪತ್ರ ಪಡೆದು, ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಹಾಗೂ ಅಭಿವೃದ್ಧಿ ಶುಲ್ಕ ಪಾವತಿಸಿಕೊಂಡು ಏಕ ನಿವೇಶನ ವಿನ್ಯಾಸ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 24**

ತುಮಕೂರು ನಗರದ ಮರಳೂರು ಗ್ರಾಮದ ಸರ್ವೆ ನಂಬರ್ 88 ರಲ್ಲಿ 0-20 ಗುಂಟೆ ಜಾಗಕ್ಕೆ ವಸತಿ ಉದ್ದೇಶಕ್ಕೆ ವಿಭಜಿತ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ**

ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ಕೆ.ಸಿ.ಶ್ರೀನಿವಾಸ್ ಇವರು ತುಮಕೂರು ನಗರದ, ಮರಳೂರು ಗ್ರಾಮದ ಸರ್ವೆ ನಂಬರ್ 88 ರಲ್ಲಿ 0-22 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಕೋರಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯ ಆದೇಶ ಸಂಖ್ಯೆ ಎಎಲ್ಎನ್ / ಎಸ್ಆರ್ / 93 /2000-01 ದಿನಾಂಕ 05-10-2000 ರಂತೆ ವಾಸದ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ. ಸದರಿ ಪ್ರದೇಶಕ್ಕೆ ದಕ್ಷಿಣದ ಕಡೆಯಿಂದ 9 ಮೀಟರ್ ಅಗಲದ ರಸ್ತೆ ಸಂಪರ್ಕವಿರುತ್ತದೆ. ಪರಿಷ್ಕೃತ ಮಹಾಯೋಜನೆಯಲ್ಲಿ ವಸತಿ ವಲಯಕ್ಕೆ ಕಾಯ್ದಿರಿಸಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ/ 522/ಮೈಅಪ್ರಾ/2005 ದಿನಾಂಕ 10-03-2006 ರಂತೆ ವಿನ್ಯಾಸದ ವಿಸ್ತೀರ್ಣ 4000 ಚದುರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ನಿವೇಶನಕ್ಕಾಗಿ ಮೀಸಲಿರಿಸಬೇಕಾದ ಪ್ರದೇಶದ ಮಾರುಕಟ್ಟೆ ಶುಲ್ಕ ಪಾವತಿಸಿಕೊಂಡು ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ನಿವೇಶನದಿಂದ ವಿನಾಯಿತಿ ನೀಡಿ ಪ್ರಾಧಿಕಾರದ ನಿರ್ಣಯದಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ

ಎಲ್ಲಾ ಕಾಮಗಾರಿಗಳನ್ನು ವಿನ್ಯಾಸದ ಮಾಲೀಕರು ಸ್ವಂತ ಖರ್ಚಿನಿಂದ ನಿರ್ವಹಿಸುವ ಷರತ್ತಿಗೆ ಒಳಪಟ್ಟು ವಿಭಜಿತ ವಿನ್ಯಾಸ ಅನುಮೋದನೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಸೂಕ್ತ ನಿರ್ಣಯಕ್ಕಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಸ್ಥಳ ಪರಿಶೀಲನೆಯಂತೆ, ಪ್ರಸ್ತಾವಿತ ಪ್ರದೇಶಕ್ಕೆ ರಸ್ತೆ ಸಂಪರ್ಕವಿದ್ದು, ಪರಿಷ್ಕೃತ ಮಹಾಯೋಜನೆ 2031 ರಂತೆ ಪ್ರಸ್ತಾವಿತ ಪ್ರದೇಶವು ವಸತಿ ವಲಯದಲ್ಲಿ ಬರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪ್ರಸ್ತಾವಿತ ಪ್ರದೇಶಕ್ಕೆ ಭೂಪರಿವರ್ತನೆಯಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ / 522 / ಮೈಅಪ್ರಾ / 2005 ದಿನಾಂಕ 10–03–2006 ರಂತೆ ಪ್ರಸ್ತಾವಿತ ಪ್ರದೇಶಕ್ಕೆ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ವಿಭಜಿತ ನಿವೇಶನ ವಿನ್ಯಾಸ ಅನುಮೋದನೆ ನೀಡಬಹುದಾಗಿರುತ್ತದೆ.

**ತೀರ್ಮಾನ** ಸದರಿ ವಿಷಯವನ್ನು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಅರ್ಜಿದಾರರಾದ ಶ್ರೀ ಕೆ.ಸಿ.ಶ್ರೀನಿವಾಸ್ ಇವರು ತುಮಕೂರು ನಗರದ, ಮರಳೂರು ಗ್ರಾಮದ ಸರ್ವೆ ನಂಬರ್ 88 ರಲ್ಲಿ 0–22 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಕೋರಿರುವ ವಿಷಯವನ್ನು ಪರಿಗಣಿಸಲಾಯಿತು. ಅರ್ಜಿದಾರರಿಂದ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ಅರ್ಜಿದಾರರೇ ಸ್ವಂತ ಖರ್ಚಿನಿಂದ ನಿರ್ವಹಿಸುವ ಷರತ್ತಿಗೆ ಒಳಪಟ್ಟು ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 25** ತುಮಕೂರು ನಗರದ ವೀರಸಾಗರ ಗ್ರಾಮದ ಸರ್ವೆ ನಂಬರ್ 32/2 ರಲ್ಲಿ ವಿಸ್ತೀರ್ಣ 0–39 ಗುಂಟೆ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಪರಿಷ್ಕೃತ ಏಕ ನಿವೇಶನ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ಟಿ.ಆರ್.ವಿಶ್ವನಾಥ ಇವರು ತುಮಕೂರು ನಗರದ ವೀರಸಾಗರ ಗ್ರಾಮದ ಸರ್ವೆ ನಂಬರ್ 32/2 ರಲ್ಲಿ ವಿಸ್ತೀರ್ಣ 0–39 ಗುಂಟೆ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಪರಿಷ್ಕೃತ ಏಕ ನಿವೇಶನ ವಿನ್ಯಾಸ ಅನುಮೋದನೆ ನೀಡಲು ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯ ಆದೇಶ ಸಂಖ್ಯೆ ಎಎಲ್ಎನ್(ಟಿಎಂಕೆ)/ಸಿಆರ್/220/2010-11 ದಿನಾಂಕ 07-01-2011 ರಂತೆ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ. ಈ ಕಛೇರಿಯ ಏಕ ನಿವೇಶನ ನಕ್ಷೆ ದೃಢೀಕರಣ ಆದೇಶ ಸಂಖ್ಯೆ ನಅಪ್ರಾತು/ಯೋ/ಏಕ ನಿವೇಶನ/ 127/ನಕ್ಷೆ

ದೃಢೀಕರಣ/2010-11 ದಿನಾಂಕ 12-05-2011 ರಂತ ವಸತಿ ಉದ್ದೇಶಕ್ಕೆ ಏಕ ನಿವೇಶನ ಅನುಮೋದನೆಯಾಗಿರುತ್ತದೆ. ಆದರೆ ಅರ್ಜಿದಾರರ ಕೋರಿಕೆಯಂತೆ ಈ ಹಿಂದೆ ಮೋಜಣಿದಾರರಿಂದ ಪಡೆದಿರುವ ಮೂಲ ಸರ್ವೆ ಸ್ಕೆಚ್‌ನಲ್ಲಿ ವಿಸ್ತೀರ್ಣ ವ್ಯತ್ಯಾಸವಾಗಿದ್ದು, ಹೊಸದಾಗಿ ಪರಿಷ್ಕೃತ ಮೂಲ ಸರ್ವೆ ಸ್ಕೆಚ್‌ನ್ನು ಮೋಜಣಿದಾರರಿಂದ ಪಡೆದು ಸಲ್ಲಿಸಿರುತ್ತಾರೆ. ಪರಿಷ್ಕೃತ ಸರ್ವೆ ನಕ್ಷೆಯಂತೆ ಪರಿಷ್ಕೃತ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಅರ್ಜಿದಾರರ ಕೋರಿಕೆಯಂತೆ ಈ ಹಿಂದೆ ಮೋಜಣಿದಾರರಿಂದ ಪಡೆದಿರುವ ಮೂಲ ಸರ್ವೆ ಸ್ಕೆಚ್‌ನಲ್ಲಿ ವಿಸ್ತೀರ್ಣ ವ್ಯತ್ಯಾಸವಾಗಿದ್ದು, ಹೊಸದಾಗಿ ಪರಿಷ್ಕೃತ ಮೂಲ ಸರ್ವೆ ಸ್ಕೆಚ್‌ನ್ನು ಮೋಜಣಿದಾರರಿಂದ ಪಡೆದು ಸಲ್ಲಿಸಿರುತ್ತಾರೆ. ಪರಿಷ್ಕೃತ ಸರ್ವೆ ನಕ್ಷೆಯಂತೆ ಪರಿಷ್ಕೃತ ವಿನ್ಯಾಸಕ್ಕೆ ಅನುಮೋದನೆ ನೀಡಬಹುದಾಗಿರುತ್ತದೆ.

**ತೀರ್ಮಾನ** ಸದರಿ ವಿಷಯುವನ್ನು ಪ್ರಾಧಿಕಾರದಲ್ಲಿ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ವೀರಸಾಗರ ಗ್ರಾಮದ ಸರ್ವೆ ನಂಬರ್ 32/2 ರಲ್ಲಿ ವಿಸ್ತೀರ್ಣ 0-39 ಗುಂಟೆ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಪರಿಷ್ಕೃತ ಏಕ ನಿವೇಶನ ವಿನ್ಯಾಸ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 26** ತುಮಕೂರು ನಗರದ ಬಸವಾಪಟ್ಟಣ ಗ್ರಾಮದ ಸರ್ವೆ ನಂಬರ್ 42/1 ರಲ್ಲಿ 1 ಎಕರೆ 19 ಗುಂಟೆ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ಕೆ.ಹೆಚ್.ಗಂಗಹನುಮಯ್ಯ ಎಂಬುವವರು ತುಮಕೂರು ನಗರದ ಬಸವಾಪಟ್ಟಣ ಗ್ರಾಮದ ಸರ್ವೆ ನಂಬರ್ 42/1 ರಲ್ಲಿ 1 ಎಕರೆ 19 ಗುಂಟೆ ಪ್ರದೇಶದಲ್ಲಿ ವಾಸದ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ನೀಡಲು ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯ ಆದೇಶ ಸಂಖ್ಯೆ ಎಎಲ್‌ಎನ್(ಟಿಎಂಕೆ)/ಸಿಆರ್/300/2008-09 ದಿನಾಂಕ 03-09-2010 ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ. ಸದರಿ ಪ್ರದೇಶವು ಪರಿಷ್ಕೃತ ಮಹಾಯೋಜನೆಯಂತೆ ವಸತಿ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಸದರಿ ಪ್ರದೇಶಕ್ಕೆ ಪಶ್ಚಿಮದ ಕಡೆಯಿಂದ 9 ಮೀಟರ್ ಅಗಲದ ರಸ್ತೆ ಸಂಪರ್ಕವಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ ನಅಇ / 377 / ಬೆಂರೂಪ್ರಾ / 2010 ದಿನಾಂಕ 10-03-2011 ರ ವಲಯ ನಿಯಮಾವಳಿ ಪ್ರಕಾರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು

ವಿನ್ಯಾಸ ಮಾಲೀಕರು ಸ್ವಂತ ಖರ್ಚಿನಿಂದ ನಿರ್ವಹಿಸುವ ಷರತ್ತಿಗೆ ಒಳಪಟ್ಟು ವಿನ್ಯಾಸ ಅನುಮೋದನೆ ನೀಡಲು ಪರಿಗಣಿಸಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಸ್ಥಳ ಪರಿಶೀಲನೆಯಂತೆ, ಪ್ರಸ್ತಾವಿತ ಪ್ರದೇಶಕ್ಕೆ ರಸ್ತೆ ಸಂಪರ್ಕವಿದ್ದು, ಪರಿಷ್ಕೃತ ಮಹಾಯೋಜನೆ 2031 ರಂತೆ ಪ್ರಸ್ತಾವಿತ ಪ್ರದೇಶವು ವಸತಿ ವಲಯದಲ್ಲಿ ಬರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪ್ರಸ್ತಾವಿತ ಪ್ರದೇಶಕ್ಕೆ ಭೂಪರಿವರ್ತನೆಯಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ ನಅಇ / 377 / ಬೆಂರೂಪ್ರಾ / 2010 ದಿನಾಂಕ 10–03–2011 ರಂತೆ ಪ್ರಸ್ತಾವಿತ ಪ್ರದೇಶಕ್ಕೆ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ವಿನ್ಯಾಸ ನಕ್ಷೆ ಅನುಮೋದನೆ ನೀಡಬಹುದಾಗಿರುತ್ತದೆ.

**ತೀರ್ಮಾನ**

ಸದರಿ ವಿಷಯವನ್ನು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಅರ್ಜಿದಾರರಾದ ಶ್ರೀ ಕೆ.ಹೆಚ್.ಗಂಗಹನುಮಯ್ಯ ಎಂಬುವವರು ತುಮಕೂರು ನಗರದ ಬಸವಾಪಟ್ಟಣ ಗ್ರಾಮದ ಸರ್ವೆ ನಂಬರ್ 42/1 ರಲ್ಲಿ 1 ಎಕರೆ 19 ಗುಂಟೆ ಪ್ರದೇಶದಲ್ಲಿ ವಾಸದ ಉಪಯೋಗಕ್ಕೆ ವಿನ್ಯಾಸ ಅನುಮೋದನೆ ನೀಡಲು ಕೋರಿರುವ ವಿಷಯವನ್ನು ಪರಿಗಣಿಸಿಸಲಾಯಿತು. ಅರ್ಜಿದಾರರಿಂದ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ಅರ್ಜಿದಾರರೇ ಸ್ವಂತ ಖರ್ಚಿನಿಂದ ನಿರ್ವಹಿಸಲು ಆದೇಶಿಸುವಂತೆ ತೀರ್ಮಾನಿಸಲಾಯಿತು. ವಸತಿ ವಿನ್ಯಾಸದಲ್ಲಿ ರಚಿಸಲಾಗುವ ಉದ್ಯಾನವನಕ್ಕೆ ಕಲ್ಲಿನ ಬೆಸ್‌ಮೆಂಟ್, ಚೈನ್‌ಲಿಂಕ್ ಪೆನ್ಸಿಂಗ್ ಮತ್ತು ನಾಮಫಲಕ ಅಳವಡಿಸಿ, ಸಸಿಗಳನ್ನು ನೆಡುವಂತೆ ಹಾಗೂ ಸಿ.ಎ.ನಿವೇಶನಕ್ಕೆ ನಾಮಫಲಕ ಅಳವಡಿಸುವ ಷರತ್ತಿಗೊಳಪಟ್ಟು ವಿನ್ಯಾಸ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 27**

ತುಮಕೂರು ನಗರದ ಅರಕೆರೆ ಗ್ರಾಮದ ಸರ್ವೆ ನಂಬರ್ 85/4 ರಲ್ಲಿ 0–20 ಗುಂಟೆ ಜಾಗಕ್ಕೆ ವಸತಿ ಉದ್ದೇಶಕ್ಕೆ ವಿಭಜಿತ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ**

ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀಮತಿ ಲಕ್ಷ್ಮೀ ಎಂಬುವವರು ತುಮಕೂರು ನಗರದ, ಅರಕೆರೆ ಗ್ರಾಮದ ಸರ್ವೆ ನಂಬರ್ 85/4 ರಲ್ಲಿ 0–20 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಕೋರಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯ ಆದೇಶ ಸಂಖ್ಯೆ ಎಎಲ್‌ಎನ್(ಟಿಎಂಕೆ)/ಸಿಆರ್/

268/2011-12 ದಿನಾಂಕ 06-09-2011 ರಂತೆ ವಾಸದ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ. ಸದರಿ ಪ್ರದೇಶಕ್ಕೆ ಪೂರ್ವದ ಕಡೆಯಿಂದ ರಸ್ತೆ ಸಂಪರ್ಕವಿರುತ್ತದೆ. ಪರಿಷ್ಕೃತ ಮಹಾಯೋಜನೆಯಲ್ಲಿ ವಸತಿ ವಲಯಕ್ಕೆ ಕಾಯ್ದಿರಿಸಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ/522/ಮೈಅಪ್ರಾ/2005 ದಿನಾಂಕ 10-03-2006 ರಂತೆ ವಿನ್ಯಾಸದ ವಿಸ್ತೀರ್ಣ 4000 ಚದುರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ನಿವೇಶನಕ್ಕಾಗಿ ಮೀಸಲಿರಿಸಬೇಕಾದ ಪ್ರದೇಶದ ಮಾರುಕಟ್ಟೆ ಶುಲ್ಕ ಪಾವತಿಸಿಕೊಂಡು ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ನಿವೇಶನದಿಂದ ವಿನಾಯಿತಿ ನೀಡಿ ಪ್ರಾಧಿಕಾರದ ನಿರ್ಣಯದಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ವಿನ್ಯಾಸದ ಮಾಲೀಕರು ಸ್ವಂತ ಖರ್ಚಿನಿಂದ ನಿರ್ವಹಿಸುವ ಷರತ್ತಿಗೆ ಒಳಪಟ್ಟು ವಿಭಜಿತ ವಿನ್ಯಾಸ ಅನುಮೋದನೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಸೂಕ್ತ ನಿರ್ಣಯಕ್ಕಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಸ್ಥಳ ಪರಿಶೀಲನೆಯಂತೆ, ಪ್ರಸ್ತಾವಿತ ಪ್ರದೇಶಕ್ಕೆ ರಸ್ತೆ ಸಂಪರ್ಕವಿದ್ದು, ಪರಿಷ್ಕೃತ ಮಹಾಯೋಜನೆ 2031 ರಂತೆ ಪ್ರಸ್ತಾವಿತ ಪ್ರದೇಶವು ವಸತಿ ವಲಯದಲ್ಲಿ ಬರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪ್ರಸ್ತಾವಿತ ಪ್ರದೇಶಕ್ಕೆ ಭೂಪರಿವರ್ತನೆಯಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ / 522 / ಮೈಅಪ್ರಾ / 2005 ದಿನಾಂಕ 10-03-2006 ರಂತೆ ಪ್ರಸ್ತಾವಿತ ಪ್ರದೇಶಕ್ಕೆ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ವಿಭಜಿತ ನಿವೇಶನ ವಿನ್ಯಾಸ ಅನುಮೋದನೆ ನೀಡಬಹುದಾಗಿರುತ್ತದೆ.

**ತೀರ್ಮಾನ** ಸದರಿ ವಿಷಯವನ್ನು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಅರ್ಜಿದಾರರಾದ ಶ್ರೀಮತಿ ಲಕ್ಷ್ಮೀ ಎಂಬುವವರು ತುಮಕೂರು ನಗರದ, ಅರಕೆರೆ ಗ್ರಾಮದ ಸರ್ವೆ ನಂಬರ್ 85/4 ರಲ್ಲಿ 0-20 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಕೋರಿರುವ ವಿಷಯವನ್ನು ಪರಿಗಣಿಸಲಾಯಿತು. ಅರ್ಜಿದಾರರಿಂದ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ಅರ್ಜಿದಾರರೇ ಸ್ವಂತ ಖರ್ಚಿನಿಂದ ನಿರ್ವಹಿಸುವ ಷರತ್ತಿಗೆ ಒಳಪಟ್ಟು ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 28** ತುಮಕೂರು ನಗರದ ಊರುಕೆರೆ ಗ್ರಾಮದ ಸರ್ವೆ ನಂಬರ್ 69/3ಬಿ ರಲ್ಲಿ 0-23 ಗುಂಟೆ ಜಾಗಕ್ಕೆ ವಸತಿ ಉದ್ದೇಶಕ್ಕೆ ವಿಭಜಿತ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ಹೆಚ್.ಸಿದ್ದಯ್ಯ ಎಂಬುವವರು ತುಮಕೂರು ನಗರದ, ಊರುಕೆರೆ ಗ್ರಾಮದ ಸರ್ವೆ ನಂಬರ್ 69/3ಬಿ ರಲ್ಲಿ 0–23 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಕೋರಿದ್ದು, ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯ ಆದೇಶ ಸಂಖ್ಯೆ ಎಎಲ್ಎನ್(ಟಿಎಂಕೆ)/ಸಿಆರ್/ 421/2010–11 ದಿನಾಂಕ 21–03–2011 ರಂತೆ ವಾಸದ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ. ಸದರಿ ಪ್ರದೇಶಕ್ಕೆ ರಸ್ತೆ ಸಂಪರ್ಕವಿರುತ್ತದೆ. ಪರಿಷ್ಕೃತ ಮಹಾಯೋಜನೆಯಲ್ಲಿ ವಸತಿ ವಲಯಕ್ಕೆ ಕಾಯ್ದಿರಿಸಲಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ/522/ಮೈಅಪ್ರಾ/2005 ದಿನಾಂಕ 10–03–2006 ರಂತೆ ವಿನ್ಯಾಸದ ವಿಸ್ತೀರ್ಣ 4000 ಚದುರ ಮೀಟರ್‌ಗಿಂತ ಕಡಿಮೆ ಇರುವುದರಿಂದ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ನಿವೇಶನಕ್ಕಾಗಿ ಮೀಸಲಿರಿಸಬೇಕಾದ ಪ್ರದೇಶದ ಮಾರುಕಟ್ಟೆ ಶುಲ್ಕ ಪಾವತಿಸಿಕೊಂಡು ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ನಿವೇಶನದಿಂದ ವಿನಾಯಿತಿ ನೀಡಿ ಪ್ರಾಧಿಕಾರದ ನಿರ್ಣಯದಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ವಿನ್ಯಾಸದ ಮಾಲೀಕರು ಸ್ವಂತ ಖರ್ಚಿನಿಂದ ನಿರ್ವಹಿಸುವ ಷರತ್ತಿಗೆ ಒಳಪಟ್ಟು ವಿಭಜಿತ ವಿನ್ಯಾಸ ಅನುಮೋದನೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಸೂಕ್ತ ನಿರ್ಣಯಕ್ಕಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಸ್ಥಳ ಪರಿಶೀಲನೆಯಂತೆ, ಪ್ರಸ್ತಾವಿತ ಪ್ರದೇಶಕ್ಕೆ ರಸ್ತೆ ಸಂಪರ್ಕವಿದ್ದು, ಪರಿಷ್ಕೃತ ಮಹಾಯೋಜನೆ 2031 ರಂತೆ ಪ್ರಸ್ತಾವಿತ ಪ್ರದೇಶವು ವಸತಿ ವಲಯದಲ್ಲಿ ಬರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಪ್ರಸ್ತಾವಿತ ಪ್ರದೇಶಕ್ಕೆ ಭೂಪರಿವರ್ತನೆಯಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ / 522 / ಮೈಅಪ್ರಾ / 2005 ದಿನಾಂಕ 10–03–2006 ರಂತೆ ಪ್ರಸ್ತಾವಿತ ಪ್ರದೇಶಕ್ಕೆ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ವಿಭಜಿತ ನಿವೇಶನ ವಿನ್ಯಾಸ ಅನುಮೋದನೆ ನೀಡಬಹುದಾಗಿರುತ್ತದೆ.

**ತೀರ್ಮಾನ** ಸದರಿ ವಿಷಯವನ್ನು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಅರ್ಜಿದಾರರಾದ ಶ್ರೀ ಹೆಚ್.ಸಿದ್ದಯ್ಯ ಎಂಬುವವರು ತುಮಕೂರು ನಗರದ, ಊರುಕೆರೆ ಗ್ರಾಮದ ಸರ್ವೆ ನಂಬರ್ 69/3ಬಿ ರಲ್ಲಿ 0–23 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಕೋರಿರುವ ವಿಷಯವನ್ನು ಪರಿಗಣಿಸಲಾಯಿತು. ಅರ್ಜಿದಾರರಿಂದ ನಿಯಮಾನುಸಾರ ಪಾವತಿಸಬೇಕಾದ ಶುಲ್ಕಗಳನ್ನು ಪಾವತಿಸಿಕೊಂಡು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 34 ರನ್ವಯ ಬಡಾವಣೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು

ಅರ್ಜಿದಾರರೇ ಸ್ವಂತ ಖರ್ಚಿನಿಂದ ನಿರ್ವಹಿಸುವ ಷರತ್ತಿಗೆ ಒಳಪಟ್ಟು ವಿಭಜಿತ ವಿನ್ಯಾಸ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 29** ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯನ್ನು ಪ್ರತಿ ಮಾಹೆ ನಿಗಧಿತ ದಿನಾಂಕದಂದು ನಡೆಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸಾಮಾನ್ಯ ಸಭೆಯನ್ನು ಪ್ರತಿ ಮಾಹೆಯಲ್ಲಿ ನೆಡಸಲಾಗಿದ್ದು, ಸದರಿ ಸಭೆಯನ್ನು ಇನ್ನು ಮುಂದೆ ಪ್ರತಿ ಮಾಹೆಯ 3ನೇ ವಾರದ ಬುಧವಾರದಂದು ನಡೆಸುವುದು ಸೂಕ್ತವಾಗಿರುತ್ತದೆ. ಅದರಂತೆ ಪ್ರಾಧಿಕಾರದ ಸಭೆಯಲ್ಲಿ ಸೂಕ್ತ ತೀರ್ಮಾನಕ್ಕಾಗಿ ವಿಷಯವನ್ನು ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಪ್ರಾಧಿಕಾರದ ಸಭೆಯನ್ನು ನಿಯತವಾಗಿ ನಿಗಧಿಪಡಿಸಿದಲ್ಲಿ ಸಾರ್ವಜನಿಕರು ವಿಷಯವನ್ನು ಪ್ರಾಧಿಕಾರದ ಸಭೆಗೆ ತರಲು ಅರ್ಜಿ ನೀಡಲು ಸಹಕಾರಿಯಾಗುತ್ತದೆ ಮತ್ತು ಹೆಚ್ಚುವರಿ ವಿಷಯಗಳ ಮಂಡನೆಯನ್ನು ಗಣನೀಯವಾಗಿ ಕಡಿಮೆ ಗೊಳಿಸಬಹುದೆಂದು ಆಯುಕ್ತರು ಸಭೆಗೆ ತಿಳಿಸಿದರು. ಈ ಅಂಶಗಳ ಹಿನ್ನೆಲೆಯಲ್ಲಿ ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸಾಮಾನ್ಯ ಸಭೆಯನ್ನು ಪ್ರತಿ ಮಾಹೆಯ 3ನೇ ವಾರದ ಬುಧವಾರದಂದು ನಡೆಸಲು ಮತ್ತು ಅಧ್ಯಕ್ಷರ ಅಪ್ಪಣೆಯ ಮೇಲೆ ತರಬಹುದಾದ ವಿಷಯಗಳ ಸಂಖ್ಯೆಯನ್ನು ಗರಿಷ್ಠ ಹತ್ತು ವಿಷಯಗಳಿಗೆ ಮಿತಿಗೊಳಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 30** ಪ್ರಾಧಿಕಾರದ ಟೆಂಡರ್ ಪ್ರಕಟಣೆ ಸಂಖ್ಯೆ ಟಿಯುಡಿಎ/ಟೆಂಡರ್/ಸಕಾಇ/02/ 2011-12 ದಿನಾಂಕ 23-09-2011 ರಂದು ಕರೆದಿರುವ ಕಾಮಗಾರಿಗಳ ಟೆಂಡರ್‌ಗಳನ್ನು ಅನುಮೋದಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಕೈಗೊಳ್ಳಲು ಉದ್ದೇಶಿಸಿರುವ ವಿವಿಧ ಬಡಾವಣೆಗಳ ಒಟ್ಟು 5 ಉದ್ಯಾನವನಗಳ ಸುತ್ತಲೂ ಚೈನ್ ಲಿಂಕ್ ತಂತಿ ಬೇಲಿ ಅಳವಡಿಸಿ ಅಭಿವೃದ್ಧಿ ಪಡಿಸುವ ಕಾಮಗಾರಿಗಳಿಗೆ E-Procurement ಮುಖಾಂತರ 2ನೇ ಬಾರಿ ಮರು ಟೆಂಡರ್ ಪ್ರಕಟಣೆ ಅಧಿಸೂಚನೆಯನ್ನು ಈ ಹಿಂದೆ ದಿನಾಂಕ 23-09-2011 ರಂದು ಹೊರಡಿಸಿದ್ದು, ಟೆಂಡರ್‌ಗಳನ್ನು ದಿನಾಂಕ 15-10-2011 ರಂದು ತೆರೆಯಲಾಗಿರುತ್ತದೆ. ಸದರಿ 5 ಟೆಂಡರ್‌ಗಳಲ್ಲಿ, 3 ಟೆಂಡರ್ ಕಾಮಗಾರಿಗಳಿಗೆ ಭಾಗವಹಿಸಿದ್ದ ಗುತ್ತಿಗೆದಾರರ ಟೆಂಡರ್ Evaluation ಕೈಗೊಂಡು ನಿಗಧಿ ಪಡಿಸಿದ ಮಾನದಂಡಗಳಿಗೆ ಅನುಸಾರವಾಗಿ ತಾಂತ್ರಿಕ ಅರ್ಹತೆಯನ್ನು ಪರಿಶೀಲಿಸಿದೆ. ತಾಂತ್ರಿಕ ಅರ್ಹತೆ

ಪಡೆದ ಗುತ್ತಿಗೆದಾರರ ಟೆಂಡರ್ ದರಗಳ ಆಧಾರದ ಮೇಲೆ ತುಲನಾತ್ಮಕ ಪಟ್ಟಿಯನ್ನು ತಯಾರಿಸಿದ್ದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

**ಕ್ರಮ ಸಂಖ್ಯೆ-1 ಕೆಲಸದ ಹೆಸರು :** ತುಮಕೂರು ನಗರದ ಮಾರುತಿ ನಗರದ ಉದ್ಯಾನವನಕ್ಕೆ ಕರ್ಬಿಂಗ್ ಸ್ಟೋನ್ ಮತ್ತು ಇಂಟರ್ ಲಾಕ್ ಟೈಲ್ಸ್ ಅಳವಡಿಸುವ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

| ಕ್ರ ಸಂ. | ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ | ಗುತ್ತಿಗೆದಾರರು ನಮೂಸಿದಿರುವ ಮೊತ್ತ | ವ್ಯತ್ಯಾಸದ ಮೊತ್ತ | ಶೇಕಡವಾರು ಹೆಚ್ಚು/ ಕಡಿಮೆ |
|---|---|---|---|---|---|
| 1. | ಶ್ರೀ ಕೆ.ವಿ.ಶ್ರೀನಿವಾಸ (ಎರಡನೇ ದರ್ಜೆ ಗುತ್ತಿಗೆದಾರರು) | 458056.00 | 410528.00 | 47528.00 | 10.38 (ಕಡಿಮೆ) |
| 2. | ಶ್ರೀ ಟಿ.ರವಿಶಂಕರ್ (ಮೊದಲನೇ ದರ್ಜೆ ಗುತ್ತಿಗೆದಾರರು) | 458056.00 | 444112.00 | 13944.00 | 3.04 (ಕಡಿಮೆ) |
| 3. | ಶ್ರೀ ರುದ್ರಯ್ಯ (ಮೊದಲನೇ ದರ್ಜೆ ಗುತ್ತಿಗೆದಾರರು) | 458056.00 | 427656.00 | 30400.00 | 6.64 (ಕಡಿಮೆ) |

ಮೇಲ್ಕಂಡ ಕಾಮಗಾರಿಯ ಟೆಂಡರ್‌ಗೆ ಒಟ್ಟು ಆರು ಜನ ಗುತ್ತಿಗೆದಾರರು ಟೆಂಡರ್ ಸಲ್ಲಿಸಿದ್ದು, ಇವುಗಳಲ್ಲಿ 5 ಜನ ಗುತ್ತಿಗೆದಾರರು ತಾಂತ್ರಿಕ ಅರ್ಹತೆ ಹೊಂದಿರುತ್ತಾರೆ. ಈ 5 ಜನ ಗುತ್ತಿಗೆದಾರರ ಪೈಕಿ ಕಡಿಮೆ ದರ ನಮೂದಿಸಿರುವ 3 ಜನ ಗುತ್ತಿಗೆದಾರರ ದರಗಳನ್ನು ತುಲನಾತ್ಮಕ ಪಟ್ಟಿಯಲ್ಲಿ ಪರಿಗಣಿಸಲಾಗಿದೆ. ಅತೀ ಕಡಿಮೆ ದರ ನಮೂದಿಸಿರುವ ಶ್ರೀ ಕೆ.ವಿ.ಶ್ರೀನಿವಾಸ್, ಎರಡನೇ ದರ್ಜೆ ಗುತ್ತಿಗೆದಾರರು, ತುಮಕೂರು ಇವರು ರೂ.410528.00 ಮೊತ್ತವನ್ನು ನಮೂದಿಸಿದ್ದು, ಈ ದರವು ಮಂಜೂರಾದ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 10.38 ರಷ್ಟು ಕಡಿಮೆ ಇರುತ್ತದೆ. ಆದುದರಿಂದ ಸದರಿಯವರ ಟೆಂಡರ್‌ನ್ನು ಅನುಮೋದಿಸಿ ಕಾರ್ಯದೇಶ ನೀಡಲು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

**ಕ್ರಮ ಸಂಖ್ಯೆ-2 ಕೆಲಸದ ಹೆಸರು :** ತುಮಕೂರು ನಗರದ ಚೆನ್ನನದಿಣ್ಣೆ ಗ್ರಾಮದ ಸರ್ವೆ ನಂಬರ್ 20 ರ ಉದ್ಯಾನವನಕ್ಕೆ ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸುವ ಕಾಮಗಾರಿಗೆ ಟೆಂಡರ್ ಅನುಮೋದನೆ ಕುರಿತು.

| ಕ್ರ ಸಂ. | ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ | ಗುತ್ತಿಗೆದಾರರು ನಮೂಸಿದಿರುವ ಮೊತ್ತ | ವ್ಯತ್ಯಾಸದ ಮೊತ್ತ | ಶೇಕಡವಾರು ಹೆಚ್ಚು/ ಕಡಿಮೆ |
|---|---|---|---|---|---|
| 1. | ಶ್ರೀ ರಾಮಚಂದ್ರಯ್ಯ (ಮೊದಲನೇ ದರ್ಜೆ ಗುತ್ತಿಗೆದಾರರು) | 954160.87 | 868386.70 | 85774.17 | 8.99 (ಕಡಿಮೆ) |

| | | | | | |
|---|---|---|---|---|---|
| 2. | ಶ್ರೀ ಟಿ.ರವಿಶಂಕರ್ (ಮೊದಲನೇ ದರ್ಜೆ ಗುತ್ತಿಗೆದಾರರು) | 954160.87 | 924546.67 | 29614.20 | 3.10 (ಕಡಿಮೆ) |

ಮೇಲ್ಕಂಡ ಕಾಮಗಾರಿಯ ಟೆಂಡರ್‌ಗೆ ಒಟ್ಟು 3 ಜನ ಗುತ್ತಿಗೆದಾರರು ಟೆಂಡರ್ ಸಲ್ಲಿಸಿದ್ದು, ತಾಂತ್ರಿಕ ಅರ್ಹತೆ ಹೊಂದಿರುವ ಇಬ್ಬರು ಗುತ್ತಿಗೆದಾರರ ದರಗಳನ್ನು ತುಲನಾತ್ಮಕ ಪಟ್ಟಿಯಲ್ಲಿ ಪರಿಗಣಿಸಲಾಗಿದೆ. ಅತೀ ಕಡಿಮೆ ದರ ನಮೂದಿಸಿರುವ ಶ್ರೀ ರಾಮಚಂದ್ರಯ್ಯ, ಮೊದಲನೇ ದರ್ಜೆ ಗುತ್ತಿಗೆದಾರರು, ಬೆಂಗಳೂರು ಇವರು ರೂ.868386.70 ಮೊತ್ತವನ್ನು ನಮೂದಿಸಿದ್ದು, ಈ ದರವು ಮಂಜೂರಾದ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 8.99 ರಷ್ಟು ಕಡಿಮೆ ಇರುತ್ತದೆ. ಆದುದರಿಂದ ಸದರಿಯವರ ಟೆಂಡರ್‌ನ್ನು ಅನುಮೋದಿಸಿ ಕಾರ್ಯದೇಶ ನೀಡಲು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

**ಕ್ರಮ ಸಂಖ್ಯೆ–3 ಕೆಲಸದ ಹೆಸರು :** ತುಮಕೂರು ನಗರದ ಸಪ್ತಗಿರಿ (ಪಶ್ಚಿಮ) ಬಡಾವಣೆಯ (ವಾರ್ಡ್ ನಂ.30) ಕಲ್ಪತರು ಉದ್ಯಾನವನಕ್ಕೆ ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸುವ ಕಾಮಗಾರಿಗೆ ಟೆಂಡರ್ ಅನುಮೋದನೆ ಕುರಿತು.

| ಕ್ರ ಸಂ. | ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ | ಗುತ್ತಿಗೆದಾರರು ನಮೂಸಿದಿರುವ ಮೊತ್ತ | ವ್ಯತ್ಯಾಸದ ಮೊತ್ತ | ಶೇಕಡವಾರು ಹೆಚ್ಚು/ ಕಡಿಮೆ |
|---|---|---|---|---|---|
| 1. | ಶ್ರೀ ಶಿವಶಂಕರ್ ಬಿ ಪಾಟೀಲ್ (ಮೊದಲನೇ ದರ್ಜೆ ಗುತ್ತಿಗೆದಾರರು) | 884557.56 | 867558.20 | 16999.36 | 1.92 (ಕಡಿಮೆ) |
| 2. | ಶ್ರೀ ಟಿ.ರವಿಶಂಕರ್ (ಮೊದಲನೇ ದರ್ಜೆ ಗುತ್ತಿಗೆದಾರರು) | 884557.56 | 926166.00 | 41608.44 | 4.70 (ಹೆಚ್ಚು) |

ಮೇಲ್ಕಂಡ ಕಾಮಗಾರಿಯ ಟೆಂಡರ್‌ಗೆ ಒಟ್ಟು 3 ಜನ ಗುತ್ತಿಗೆದಾರರು ಟೆಂಡರ್ ಸಲ್ಲಿಸಿದ್ದು, ಇಬ್ಬರು ಗುತ್ತಿಗೆದಾರರು ತಾಂತ್ರಿಕ ಅರ್ಹತೆ ಹೊಂದಿರುತ್ತಾರೆ. ಈ ಇಬ್ಬರು ಗುತ್ತಿಗೆದಾರರ ದರಗಳನ್ನು ತುಲನಾತ್ಮಕ ಪಟ್ಟಿಯಲ್ಲಿ ಪರಿಗಣಿಸಲಾಗಿದೆ. ಅತೀ ಕಡಿಮೆ ದರ ನಮೂದಿಸಿರುವ ಶ್ರೀ ಶಿವಶಂಕರ್ ಬಿ ಪಾಟೀಲ್ ಮೊದಲನೇ ದರ್ಜೆ ಗುತ್ತಿಗೆದಾರರು ಬೆಂಗಳೂರು, ಇವರು ರೂ.867558.20 ಮೊತ್ತವನ್ನು ನಮೂದಿಸಿದ್ದು, ಈ ದರವು ಮಂಜೂರಾದ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇಕಡ 1.92 ರಷ್ಟು ಕಡಿಮೆ ಇರುತ್ತದೆ. ಆದುದರಿಂದ ಸದರಿಯವರ ಟೆಂಡರ್‌ನ್ನು ಅನುಮೋದಿಸಿ ಕಾರ್ಯದೇಶ ನೀಡಲು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಉದ್ಯಾನವನಗಳಿಗೆ ಗೇಟ್‌ನ್ನು ಸಹ ಗುತ್ತಿಗೆದಾರರು ನಿರ್ಮಿಸುವ ಮತ್ತು ಸಿಮೆಂಟ್ ನಾಮಫಲಕ, ಚೈನ್‌ಲಿಂಕ್ ಪೆನ್ಸಿಂಗ್‌ಗೆ ಟೂಡಾ ಎಂಬ ನಾಮಫಲಕವನ್ನು ಪೆನ್ಸಿಂಗ್ ಮತ್ತು ಕಂಬಗಳಿಗೆ ಅಳವಡಿಸಲು ಗುತ್ತಿಗೆದಾರರಿಗೆ ಸೂಚಿಸುವ ಷರತ್ತುಗೊಳಪಟ್ಟು ಸದರಿ

ಕಾಮಗಾರಿಗಳಲ್ಲಿ ಟೆಂಡರ್ ಅನುಮೋದನೆ ನೀಡಿ ಕಾರ್ಯಾದೇಶ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 31** ಮೇಳೇಕೋಟೆ-ವೀರಸಾಗರ ವಸತಿ ಬಡಾವಣೆಯಲ್ಲಿನ ಬಿ1 15 ಮೀಟರ್ ಅಗಲದ ರಸ್ತೆಯಲ್ಲಿರುವ ಸರ್ಕಲ್‌ಗೆ ಒಂದು ಹೈಮಾಸ್ಟ್ ಲೈಟ್‌ನ್ನು ಹಾಗೂ 20 ಸೋಡಿಯಂ ಲೈಟ್‌ಗಳನ್ನು ರಸ್ತೆಗಳಿಗೆ ಅಳವಡಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ಮೇಳೇಕೋಟೆ - ವೀರಸಾಗರ ವಸತಿ ಬಡಾವಣೆಯಲ್ಲಿ ಸುಮಾರು 100 ಕ್ಕೂ ಹೆಚ್ಚು ಮನೆಗಳು ನಿರ್ಮಿಸಿದ್ದು ಹಾಗೂ ಸದರಿ ಬಡಾವಣೆಯಲ್ಲಿ ವಿದ್ಯಾರ್ಥಿನಿಯರ ವಸತಿ ನಿಲಯ ಪ್ರಾರಂಭಗೊಂಡಿದ್ದು, ಹೊಸದಾಗಿ ಮನೆಗಳು ನಿರ್ಮಾಣವಾಗುತ್ತಿವೆ. ಈ ಬಡಾವಣೆಯ ಹಲವು ರಸ್ತೆಗಳಲ್ಲಿ ಲೈಟ್‌ಗಳು ಇಲ್ಲದ ಕಾರಣ ರಾತ್ರಿ ವೇಳೆ ಓಡಾಡಲು ತುಂಬಾ ತೊಂದರೆಯಾಗಿರುತ್ತದೆ. ಅಲ್ಲಿನ ನಿವಾಸಿಗಳು/ಸಾರ್ವಜನಿಕರು ಮನವಿ ಸಲ್ಲಿಸಿ ಒಂದು ಹೈಮಾಸ್ಟ್ ಲೈಟ್‌ನ್ನು ಸರ್ಕಲ್‌ಗೆ ಅಳವಡಿಸಲು ಹಾಗೂ ಹೊಸದಾಗಿ ಮನೆಗಳನ್ನು ನಿರ್ಮಿಸಿರುವ ರಸ್ತೆಗೆ ಸೋಡಿಯಂ ಲೈಟ್‌ಗಳನ್ನು ಅಳವಡಿಸಲು ಕೋರಿರುತ್ತಾರೆ. ಅದ ಕಾರಣ ಮೇಳೇಕೋಟೆ-ವೀರಸಾಗರ ವಸತಿ ಬಡಾವಣೆಯ ಸರ್ಕಲ್‌ಗೆ ಒಂದು ಹೈಮಾಸ್ಟ್ ಲೈಟ್ ಹಾಗೂ 20 ಸೋಡಿಯಂ ಲೈಟ್‌ಗಳನ್ನು ರಸ್ತೆಗಳಿಗೆ ಅಳವಡಿಸಲು ಉದ್ದೇಶಿಸಿದ್ದು, ಅಲ್ಪಾವಧಿ ಟೆಂಡರ್‌ಆಹ್ವಾನಿಸಿ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ನೀಡುವ ಸಂಬಂಧ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ಮೇಳೇಕೋಟೆ-ವೀರಸಾಗರ ವಸತಿ ಬಡಾವಣೆಯಲ್ಲಿನ ಬಿ1 15 ಮೀಟರ್ ಅಗಲದ ರಸ್ತೆಯಲ್ಲಿರುವ ಸರ್ಕಲ್‌ಗೆ ಒಂದು ಹೈಮಾಸ್ಟ್ ಲೈಟ್‌ನ್ನು ಹಾಗೂ 20 ಸೋಡಿಯಂ ಲೈಟ್‌ಗಳನ್ನು ರಸ್ತೆಗಳಿಗೆ ಅಳವಡಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ಸಂಖ್ಯೆ 32** ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿ ಪಡಿಸಲಾಗುತ್ತಿರುವ ಉದ್ಯಾನವನಗಳಲ್ಲಿ ನೀರಿನ ಸೌಲಭ್ಯ ಕಲ್ಪಿಸಲು ಕೊಳವೆ ಬಾವಿ ಕೊರೆದು ಪಂಪ್ ಸೆಟ್ ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ವಿವಿಧ ಬಡಾವಣೆಗಳಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಕೆಲವು ಉದ್ಯಾನವನಗಳಲ್ಲಿ ನೀರಿನ ಸೌಲಭ್ಯವಿರುವುದಿಲ್ಲ. ಆದುದರಿಂದ ಈ ಉದ್ಯಾನವನಗಳಿಗೆ ನೀರಿನ ಸೌಲಭ್ಯ ಕಲ್ಪಿಸಲು ಕೊಳವೆ ಬಾವಿ ಕೊರೆದು ಪಂಪ್‌ಸೆಟ್ ಅಳವಡಿಸಬೇಕಾಗಿರುತ್ತದೆ. ಸದರಿ ಕಾಮಗಾರಿಯನ್ನು ತೆಗೆದುಕೊಳ್ಳಲು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಲ್ಯಾಂಡ್‌ಸ್ಕೇಪ್ ಮಾಡಿ ಅಭಿವೃದ್ಧಿ ಪಡಿಸಲಾಗುತ್ತಿರುವ ಉದ್ಯಾನವನಗಳಲ್ಲಿ ನೀರಿನ ಸೌಲಭ್ಯ ಅಗತ್ಯವಿರುವ ಉದ್ಯಾನವನಗಳಲ್ಲಿ ಕಲ್ಪಿಸಲು ಅಗತ್ಯವಿರುವ ಉದ್ಯಾನವನಗಳಲ್ಲಿ ಕೊಳವೆ ಬಾವಿ ಕೊರೆದು ಪಂಪ್ ಸೆಟ್ ಅಳವಡಿಸುವಂತೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 33** ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ವಸತಿ ಉದ್ದೇಶಕ್ಕೆ ಅನುಮೋದಿಸುತ್ತಿರುವ ಏಕ ನಿವೇಶನಗಳ ವಿನ್ಯಾಸಗಳಿಗೆ ಅಭಿವೃದ್ಧಿ ಕಾರ್ಯಗಳನ್ನು ನಿರ್ವಹಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಪ್ರಾಧಿಕಾರದ ತೀರ್ಮಾನದಂತೆ ಚದುರ ಮೀಟರ್ ಒಂದಕ್ಕೆ ಶುಲ್ಕ ರೂ.150 ಗಳನ್ನು ಪಾವತಿಸಿಕೊಂಡು ಏಕ ನಿವೇಶನ ವಿನ್ಯಾಸವನ್ನು ಅನುಮೋದಿಸಲಾಗುತ್ತಿದೆ. ಚರಂಡಿ ಹಾಗೂ ಜಲ್ಲಿ ರಸ್ತೆ ಇರುವ ಜಾಗಗಳನ್ನು ಹೊರತುಪಡಿಸಿ ಕಚ್ಚಾ ರಸ್ತೆ ಇರುವ ನಿವೇಶನಗಳಿಗೆ ಏಕ ನಿವೇಶನ ವಿನ್ಯಾಸ ಅನುಮೋದಿಸುವ ಸಂದರ್ಭದಲ್ಲಿ ಜಲ್ಲಿ ರಸ್ತೆ ಹಾಗೂ ಚರಂಡಿ ಕಾಮಗಾರಿಗಳನ್ನು ನಿರ್ವಹಿಸಿ, ಅರ್ಜಿದಾರರು ಉಳಿಕೆ ಅಭಿವೃದ್ಧಿ ಕಾಮಗಾರಿಗಳಿಗೆ ಚದುರ ಮೀಟರ್ ಒಂದಕ್ಕೆ ರೂ.150 ಗಳನ್ನು ಪಾವತಿಸಿಕೊಳ್ಳುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :** ಚರಂಡಿ ಹಾಗೂ ಜಲ್ಲಿ ರಸ್ತೆ ಇರುವ ಜಾಗಗಳನ್ನು ಹೊರತುಪಡಿಸಿ ಕಚ್ಚಾ ರಸ್ತೆ ಇರುವ ನಿವೇಶನಗಳಿಗೆ ಏಕ ನಿವೇಶನ ವಿನ್ಯಾಸ ಅನುಮೋದಿಸುವ ಸಂದರ್ಭದಲ್ಲಿ ಜಲ್ಲಿ ರಸ್ತೆ ಹಾಗೂ ಚರಂಡಿ ಕಾಮಗಾರಿಗಳನ್ನು ನಿರ್ವಹಿಸಿ, ಅರ್ಜಿದಾರರು ಉಳಿಕೆ ಅಭಿವೃದ್ಧಿ ಕಾಮಗಾರಿಗಳಿಗೆ ಚದುರ ಮೀಟರ್ ಒಂದಕ್ಕೆ ರೂ.150 ಗಳನ್ನು ಪಾವತಿಸಿಕೊಳ್ಳಬಹುದಾಗಿರುತ್ತದೆ.

**ತೀರ್ಮಾನ** ಸದರಿ ವಿಷಯವನ್ನು ಮತ್ತು ನಗರ ಯೋಜನಾ ಸದಸ್ಯರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಏಕ ನಿವೇಶನಗಳ ಅನುಮೋದನೆ ಸಂದರ್ಭದಲ್ಲಿ ವಿಸ್ತೀರ್ಣ ಪರಿಗಣಿಸಿ, ಜಿಲ್ಲಾಧಿಕಾರಿಗಳು ನೀಡಿರುವ ಭೂ ಪರಿವರ್ತನೆಯ ವಿಸ್ತೀರ್ಣಕ್ಕೆ ಸಂಪೂರ್ಣವಾಗಿ ಅರ್ಜಿದಾರರ ಹೆಸರಿಗೆ ವಿನ್ಯಾಸ ಅನುಮೋದನೆ ಮಾಡುವ ಸಂದರ್ಭಗಳಲ್ಲಿ ಮಾತ್ರ ಈ ವಿಚಾರವು ಸೀಮಿತವಾಗಿರಬೇಕೆಂದು ಆಯುಕ್ತರು ಅಭಿಪ್ರಾಯ ನೀಡಿದರು. ಚರಂಡಿ ಹಾಗೂ ಜಲ್ಲಿ ರಸ್ತೆ ಇರುವ ಜಾಗಗಳನ್ನು ಹೊರತುಪಡಿಸಿ ಕಚ್ಚಾ ರಸ್ತೆ ಇರುವ ನಿವೇಶನಗಳಿಗೆ ಏಕ ನಿವೇಶನ ವಿನ್ಯಾಸ ಅನುಮೋದಿಸುವ ಸಂದರ್ಭದಲ್ಲಿ ಜಲ್ಲಿ ರಸ್ತೆ ಹಾಗೂ ಚರಂಡಿ ಕಾಮಗಾರಿಗಳನ್ನು ನಿರ್ವಹಿಸಿ, ಅರ್ಜಿದಾರರು ಉಳಿಕೆ ಅಭಿವೃದ್ಧಿ ಕಾಮಗಾರಿಗಳಿಗೆ ಚದುರ ಮೀಟರ್

ಒಂದಕ್ಕೆ ರೂ.150 ಗಳನ್ನು ಪಾವತಿಸಿಕೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 34**

ತುಮಕೂರು ನಗರದ ಮರಳೂರು ಗ್ರಾಮದ ಸರ್ವೆ ನಂಬರ್ 67/1 ರ ಸಿ.ಎ. ನಿವೇಶನ ಜಾಗದಲ್ಲಿ ಸಮುದಾಯ ಭವನ ಹಾಗೂ ಮೆಳೇಕೋಟೆ-ವೀರಸಾಗರ ವಸತಿ ಬಡಾವಣೆಯಲ್ಲಿನ ವಾಣಿಜ್ಯ ನಿವೇಶನ ಜಾಗದಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ನಿರ್ಮಿಸುವ ಕಾಮಗಾರಿಗೆ ಆರ್ಕಿಟೆಕ್ಚರಲ್ ಮತ್ತು ಸ್ಟ್ರಕ್ಚರಲ್ ಡ್ರಾಯಿಂಗ್‌ನೊಂದಿಗೆ ತಾಂತ್ರಿಕ ಸಲಹೆ ನೀಡಲು ಹಾಗೂ ಡಿ.ಪಿ.ಆರ್ ತಯಾರಿಸುವ ಬಗ್ಗೆ.

**ಟಿಪ್ಪಣಿ :**

ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಕೈಗೊಳ್ಳಲು ಉದ್ದೇಶಿಸಿರುವ ಮರಳೂರು ಗ್ರಾಮದ ಸರ್ವೆ ನಂಬರ್ 67/1 ರ ಸಿ.ಎ.ನಿವೇಶನ ಜಾಗದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿ ಹಾಗೂ ಮೆಳೇಕೋಟೆ-ವೀರಸಾಗರ ವಸತಿ ಬಡಾವಣೆಯಲ್ಲಿನ ವಾಣಿಜ್ಯ ನಿವೇಶನ ಜಾಗದಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ನಿರ್ಮಿಸುವ ಕಾಮಗಾರಿಗೆ ಆರ್ಕಿಟೆಕ್ಚರಲ್ ಮತ್ತು ಸ್ಟ್ರಕ್ಚರಲ್ ಡ್ರಾಯಿಂಗ್‌ನೊಂದಿಗೆ ತಾಂತ್ರಿಕ ಸಲಹೆ ನೀಡಲು ಹಾಗೂ ಡಿ.ಪಿ.ಆರ್ ತಯಾರಿಸುವ ಸಂಬಂಧ ಕೊಟೇಷನ್‌ಗಳನ್ನು ದಿನಾಂಕ 02-09-2011 ರಂದು ಆಹ್ವಾನಿಸಲಾಗಿದ್ದು, ಸದರಿ ಕೊಟೇಷನ್‌ಗಳನ್ನು ದಿನಾಂಕ 29-09-2011 ರಂದು ತೆರೆಯಲಾಗಿರುತ್ತದೆ. ಈ ಕೆಲಸಕ್ಕೆ ಇಬ್ಬರು ತಾಂತ್ರಿಕ ಸಲಹೆಗಾರರು ಕೊಟೇಷನ್‌ಗಳನ್ನು ಸಲ್ಲಿಸಿದ್ದು, ಮೆ॥ ತ್ಯಾವಣಿಗಿ ಅಸೋಸಿಯಟ್ಸ್, ಬೆಂಗಳೂರು ರವರು ಅಂದಾಜು ಮೊತ್ತದ ಮೇಲೆ ಶೇಕಡ 3.5 ರಷ್ಟು ಶುಲ್ಕವನ್ನು ನಮೂದಿಸಿರುವರು ಹಾಗೂ ಮೆ॥ ಎಸ್ಕ್ವೇರ್, ಆರ್ಕಿಟೆಕ್ಟ್ ಬೆಂಗಳೂರು ಇವರು ಅಂದಾಜು ಮೊತ್ತದ ಮೇಲೆ ಶೇಕಡ 5 ರಷ್ಟು ಶುಲ್ಕವನ್ನು ನಮೂದಿಸಿರುವರು. ಸದರಿ ತಾಂತ್ರಿಕ ಸಲಹೆಗಾರರ ಪೈಕಿ ಮೆ॥ ತ್ಯಾವಣಿಗಿ ಅಸೋಸಿಯಟ್ಸ್, ಬೆಂಗಳೂರು ಇವರು ನಮೂದಿಸಿರುವ ಶೇಕಡ 3.5 ರಷ್ಟು ಶುಲ್ಕವನ್ನು ಕಡಿಮೆ ಮಾಡುವ ಸಲುವಾಗಿ ದಿನಾಂಕ 20-10-2011 ರಂದು ತಾಂತ್ರಿಕ ಸಲಹೆಗಾರರನ್ನು ಸಂಧಾನಕ್ಕೆ ಆಹ್ವಾನಿಸಲಾಗಿರುತ್ತದೆ. ದಿನಾಂಕ 24-10-2011 ರಂದು ನಡೆದ ಸಂಧಾನದ ಸಭೆಯಲ್ಲಿ ಶುಲ್ಕವನ್ನು ಶೇಕಡ 3 ಕ್ಕೆ ನಿರ್ವಹಿಸಲು ಸದರಿ ತಾಂತ್ರಿಕ ಸಲಹೆಗಾರರು ಒಪ್ಪಿಗೆ ನೀಡಿದ್ದು, ಅದರಂತೆ ಕೆಲಸ ನಿರ್ವಹಿಸಲು ದಿನಾಂಕ 25-10-2011 ರಂದು ಪ್ರಾಧಿಕಾರಕ್ಕೆ ಒಪ್ಪಿಗೆ ಪತ್ರ ನೀಡಿರುತ್ತಾರೆ. ಆದುದರಿಂದ ಸದರಿಯವರಿಗೆ ಸಂಧಾನದ ಶುಲ್ಕದಂತೆ ಕೆಲಸ ನಿರ್ವಹಿಸಲು ಕಾರ್ಯದೇಶ ನೀಡುವ ಸಂಬಂಧ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ**

ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ನಗರದ ಮರಳೂರು ಗ್ರಾಮದ ಸರ್ವೆ ನಂಬರ್ 67/1 ರ ಸಿ.ಎ. ನಿವೇಶನ ಜಾಗದಲ್ಲಿ ಸಮುದಾಯ ಭವನ ಹಾಗೂ ಮೆಳೇಕೋಟೆ-ವೀರಸಾಗರ ವಸತಿ ಬಡಾವಣೆಯಲ್ಲಿನ ವಾಣಿಜ್ಯ ನಿವೇಶನ ಜಾಗದಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ನಿರ್ಮಿಸುವ

ಕಾಮಗಾರಿಗೆ ಆರ್ಕಿಟೆಕ್ಚರಲ್ ಮತ್ತು ಸ್ಟ್ರಕ್ಚರಲ್ ಡ್ರಾಯಿಂಗ್‌ನೊಂದಿಗೆ ತಾಂತ್ರಿಕ ಸಲಹೆ ನೀಡಲು ಹಾಗೂ ಡಿ.ಪಿ.ಆರ್ ತಯಾರಿಸಿರುವ ಸಂಬಂಧ ಮೆ॥ ತ್ಯಾವಣಿಗಿ ಅಸೋಸಿಯಟ್ಸ್, ಬೆಂಗಳೂರು ಇವರಿಗೆ ಸಂಧಾನದ ದರ ಯೋಜನೆಯ ಅಂದಾಜು ವೆಚ್ಚದ ಶೇಕಡ 3 ರಂತೆ ನೀಡಲು ಒಪ್ಪಲಾಯಿತು ಹಾಗೂ ಕಾರ್ಯಾದೇಶ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 35** ತುಮಕೂರು ಅಮಾನಿಕೆರೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಉದ್ಯಾನವನಕ್ಕೆ ಮುಖ್ಯ ಪ್ರವೇಶದ್ವಾರ ನಿರ್ಮಿಸುವ ಕಾಮಗಾರಿಯನ್ನು ನಿರ್ಮಿತಿ ಕೇಂದ್ರಕ್ಕೆ ವಹಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ಅಮಾನಿಕೆರೆಯ ಜಿಲ್ಲಾಧಿಕಾರಿಗಳ ಕಛೇರಿ ಮುಂಭಾಗದ ಉದ್ಯಾನವನ ಅಭಿವೃದ್ಧಿ ಸಂಬಂಧ ಯೋಜನಾ ವರದಿಯಲ್ಲಿ ಸೂಚಿಸಿರುವಂತೆ ಮುಖ್ಯ ಪ್ರವೇಶದ್ವಾರ ನಿರ್ಮಿಸುವ ಕಾಮಗಾರಿಯನ್ನು ರೂ.14.00 ಲಕ್ಷಗಳಿಗೆ ಟೆಂಡರ್ ಕರೆದು ಕೈಗೊಳ್ಳಲು ದಿನಾಂಕ 29-09-2011 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 60 ರಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಆದರೆ ದಿನಾಂಕ 22-10-2011 ರಂದು ನೆಡೆದ ಸಮನ್ವಯ ಸಮಿತಿಯ ಸಭೆಯಲ್ಲಿ ಜಿಲ್ಲಾಧಿಕಾರಿಗಳು ಕೆರೆಗೆ ಮುಖ್ಯ ಪ್ರವೇಶದ್ವಾರವನ್ನು ನಿರ್ಮಿಸಲು ಸೂಚಿಸಿರುತ್ತಾರೆ. ಅಮಾನಿಕೆರೆಯ ಉಳಿಕೆ ಕಾಮಗಾರಿಯನ್ನು ತುರ್ತಾಗಿ ಕೈಗೊಂಡು ದಿನಾಂಕ 20-12-2011 ರೊಳಗಾಗಿ ಪೂರ್ಣಗೊಳಿಸಲು ಮಾನ್ಯ ನಗರಾಭಿವೃದ್ಧಿ ಸಚಿವರು ದಿನಾಂಕ 24-10-2011 ರಂದು ಅಮಾನಿಕೆರೆ ಪ್ರಗತಿ ಪರಿಶೀಲಿಸಿ ಗುತ್ತಿಗೆದಾರರಿಗೆ ಸೂಚಿಸಿರುತ್ತಾರೆ. ಸದರಿ ಕಾಮಗಾರಿಯು ಮಂಜೂರಾದ ಮುಖ್ಯ ಯೋಜನಾ ವರದಿಯಲ್ಲಿ ಇಲ್ಲದಿರುವುದರಿಂದ ಈ ಕಾಮಗಾರಿಯನ್ನು ಕೈಗೊಳ್ಳಲು ಅಂದಾಜು ಪಟ್ಟಿಯನ್ನು ಶ್ರೀ ಭರತ್ ಭೂಷಣ್ ಮೆ॥ ಕೃತಿ ಅರ್ಕಿಟೆಕ್ಚರಲ್ ಕನ್ಸಲ್‌ಟೆಂಟ್ಸ್, ಗುಲ್ಬರ್ಗಾ ಇವರು ನೀಡಿರುವ ವಿನ್ಯಾಸದಂತೆ ರೂ. 12.00 ಲಕ್ಷಗಳಿಗೆ ತಯಾರಿಸಿದ್ದು, ಸದರಿ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ಪಡೆದು ಕಾಮಗಾರಿಯನ್ನು ನಿರ್ಮಿತಿ ಕೇಂದ್ರಕ್ಕೆ ವಹಿಸುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ಅಮಾನಿಕೆರೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಉದ್ಯಾನವನಕ್ಕೆ ಮುಖ್ಯ ಪ್ರವೇಶದ್ವಾರ ನಿರ್ಮಿಸುವ ಕಾಮಗಾರಿಯನ್ನು ನಿರ್ಮಿತಿ ಕೇಂದ್ರಕ್ಕೆ ವಹಿಸುವ ಸಂಬಂಧ ಮೆ॥ ಕೃತಿ ಅರ್ಕಿಟೆಕ್ಚರಲ್ ಕನ್ಸಲ್‌ಟೆಂಟ್ಸ್, ಗುಲ್ಬರ್ಗಾ ಇವರ ನಿರ್ದೇಶನದಂತೆ ಮುಖ್ಯ ಪ್ರವೇಶದ್ವಾರವನ್ನು ತುಮಕೂರು ನಿರ್ಮಿತಿ ಕೇಂದ್ರಕ್ಕೆ ವಹಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ 36** ತುಮಕೂರು ನಗರದ ತುಮಕೂರು ಅಮಾನಿಕೆರೆಗೆ ಹೇಮಾವತಿ ನಾಲಾದಿಂದ ನೀರನ್ನು ಹರಿಸುವ ಬಗ್ಗೆ.

**ಟಿಪ್ಪಣಿ** ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ನಗರದ ತುಮಕೂರು ಅಮಾನಿಕೆರೆಯು ಪ್ರಾಧಿಕಾರದ ವತಿಯಿಂದ ಅಭಿವೃದ್ಧಿ ಪಡಿಸುತ್ತಿದ್ದು, ಇದೊಂದು ಪ್ರವಾಸೀತಾಣವಾಗಿ ರೂಪಗೊಳ್ಳಲಿದೆ. ಆದುದರಿಂದ ಮುಂದಿನ ದಿನಗಳಲ್ಲಿ ಕೆರೆಯಲ್ಲಿ ನೀರು ತುಂಬಿಸುವುದು ಅತ್ಯಾವಶ್ಯಕವಾಗಿರುತ್ತದೆ. ಈ ಸಂಬಂಧ ಪ್ರಾಧಿಕಾರವು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರಿಗೆ ಪತ್ರ ಬರೆಯಲಾಗಿದೆ. ತುಮಕೂರು ಜಿಲ್ಲೆಗೆ ಹೇಮಾವತಿಯಿಂದ ಹಂಚಿಕೆಯಾಗಿರುವ ನೀರಿನ ಪ್ರಮಾಣವು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಉಳಿದಿದ್ದು, ಈ ಸಂಬಂಧ ಹೇಮಾವತಿ ನಾಲಾದಿಂದ ಅಮಾನಿಕೆರೆಗೆ ನೀರು ಹರಿಸುವ ಸಂಬಂಧ ಮಾನ್ಯ ಘನ ಸರ್ಕಾರದಿಂದ ಅನುಮತಿ ಪಡೆಯಲು ಹಾಗೂ ಕೆರೆಗೆ ನೀರು ತುಂಬಿಸುವ ಬಗ್ಗೆ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಸೂಕ್ತ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ** ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಯಿತು. ತುಮಕೂರು ನಗರದ ತುಮಕೂರು ಅಮಾನಿಕೆರೆ ಸಮಗ್ರ ಅಭಿವೃದ್ಧಿಯ ನಂತರ ಪ್ರವಾಸಿ ಸ್ಥಳವಾಗಿ ರೂಪುಗೊಳ್ಳಲಿದೆ. ತುಮಕೂರು ನಗರಕ್ಕೆ ಕುಡಿಯುವ ನೀರು ಹಂಚಿಕೆಯಾಗಿರುವ ನೀರನ್ನು ಸಂಪೂರ್ಣವಾಗಿ ಶೇಖರಿಸುವ ದೃಷ್ಟಿಯಿಂದ ಹಾಗೂ ಅಂತರ್‌ಜಲ ಸುಧಾರಿಸುವ ಹಿನ್ನೆಲೆಯಿಂದ ಅಮಾನಿಕೆರೆಗೆ ನೀರನ್ನು ಹರಿಸುವುದು ಅತ್ಯವಶ್ಯಕವಾಗಿರುವುದರಿಂದ ಹೇಮಾವತಿ ನಾಲೆಯಿಂದ ನೀರು ಶೇಖರಿಸಲು / ಸಂಗ್ರಹಿಸಲು ಶೀಘ್ರವಾಗಿ ಅಗತ್ಯ ಕ್ರಮಕೈಗೊಳ್ಳಲು ಘನ ಸರ್ಕಾರವನ್ನು ಕೋರಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸಹಿ/–
ಅಧ್ಯಕ್ಷರು
ನಗರಾಭಿವೃದ್ಧಿ ಪ್ರಾಧಿಕಾರ
ತುಮಕೂರು.

– ನಕಲು –

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ
ತುಮಕೂರು.